ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿಂಧನೂರು.

ಸಿ.ಸಿ. ಸಂಖ್ಯೆಃ 5883/2022 CW-4 PW- 4

| | |
|---|---|
| ಹೆಸರು | ಹೇಮರಾಜ್ |
| ತಂದೆಯ ಹೆಸರು | ಗಾಳೇಪ್ಪ ವೀರಾಪುರ |
| ವಯಸ್ಸು | 52 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಸಿದ್ದಾಪುರ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ10-03-2026

ಮುಖ್ಯ ವಿಚಾರಣೆಃ ಸ ಸ ಅ ಅವರಿಂದ

ಚಾ.ಸಾ. 1 ಮತ್ತು 5 ರವರ ಪರಿಚಯ ಇದೆ.

ದಿ: 15-09-2022 ರಂದು ಮ. 3.00 ರಿಂದ 4.00 ರ ಸುಮಾರಿಗೆ ಕೂಡ್ಲಿಗಿಯ ಚಿಕ್ಕಬೋಗೆಹಳ್ಳಿಯಲ್ಲಿ ಗಂಡ ಹೆಂಡತಿಯ ಜಗಳಕ್ಕೆ ಸಂಬಂಧಿಸಿದಂತೆ ಪೋಲೀಸರು ಪಂಚನಾಮೆ ಜರುಗಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಬಸಪ್ಪ ಮತ್ತು ಹುಲಿಗೆಮ್ಮ ಇದ್ದ ಮನೆಯ ಮುಂದೆ ಜರುಗಿಸಿರುತ್ತಾರೆ. ಬಸಪ್ಪ ಎಂದರೆ ಹುಲಿಗೆಮ್ಮ ಈಕೆಯ ಗಂಡ. ಈಗ ನ್ಯಾಯಾಲಯದಲ್ಲಿ ಹಾಜರಿರುವ ವ್ಯಕ್ತಿ ಬಸಪ್ಪ ಇರುತ್ತಾನೆ. ಸಾಕ್ಷಿ ಈಗಾಗಲೇ ಗುರುತಿಸಲ್ಪಟ್ಟಿರುವ ನಿ.ಪಿ. 4 ನ್ನು ನೋಡಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 4(ಬಿ) ಎಂದು ಗುರುತಿಸಲಾಯಿತು. ನಿ.ಪಿ. 5 ನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ. ಎಂ.ಎ.ಜಿ. ವಕೀಲರಿಂದ**

ಚಿಕ್ಕಬೋಗೇಹಳ್ಳಿಗೆ ಸಿಂಧನೂರಿನಿಂದ ಬೆ. 11.00 ಕ್ಕೆ ನಾನು, ಚಾ.ಸಾ. 1 ಮತ್ತು ಪೋಲೀಸರು ಕ್ರೂಷರ್ ವಾಹನದಲ್ಲಿ ಹೋಗಿದ್ದೇವು. ಸಿಂಧನೂರಿನಿಂದ ಚಿಕ್ಕಬೋಗೇಹಳ್ಳಿ 300 ಕಿ.ಮೀ. ಆಗುತ್ತದೆ ಎಂದರೆ ಸಾಕ್ಷಿ 180 ಕಿ.ಮೀ. ಆಗುತ್ತದೆ ಎಂದು ನುಡಿಯುತ್ತಾರೆ. ಸದರಿ ಚಿಕ್ಕಬೋಗೇಹಳ್ಳಿಗೆ ಮ. 2.30 ರ ಸುಮಾರಿಗೆ ತಲುಪಿದೆವು. ಪೋಲೀಸರು ನನಗೆ ಮುಂಚಿತವಾಗಿ ನೋಟೀಸ್ ನೀಡಿರಲಿಲ್ಲ,

ಪಂಚರಾಗುವಂತೆ ಮೌಖಿಕವಾಗಿ ಹೇಳಿದ್ದರು. ನಿ.ಪಿ. 4 ರಲ್ಲಿ ಬರೆದ ಎಲ್ಲಾ ವಿಷಯ ನನಗೆ ಗೊತ್ತು. ಅದರಲ್ಲಿ ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ ಸಿ.ಸಿ. ರಸ್ತೆ, ಉತ್ತರಕ್ಕೆ ಹರೀಶ್ ಇವರ ಮನೆ, ದಕ್ಷಿಣಕ್ಕೆ ಬಸಪ್ಪ ಇವರ ಮನೆ ಎಂದು ನಮೂದಿಸಲಾಗಿದೆ. ನಿ.ಪಿ. 4 ರ ಪ್ರತಿ ಪುಟಕ್ಕೂ ನಾನು ಸಹಿ ಮಾಡಿದ್ದೇನೆ. ನಾನು ಮತ್ತು ಚಾ.ಸಾ. 5 ಚಿಕ್ಕಬೋಗೇಹಳ್ಳಿ ಗ್ರಾಮದವರು ಅಲ್ಲ ಎಂದರೆ ಸರಿ. ನಿ.ಪಿ. 5 ನ್ನು ಪೋಲೀಸರು ತಮ್ಮ ಕ್ಯಾಮರಾದಲ್ಲಿ ತೆಗೆದುಕೊಂಡಿರುತ್ತಾರೆ. ಪಂಚನಾಮೆಯಲ್ಲಿ ನಿ.ಪಿ. 5 ನ್ನು ತೆಗೆದ ಬಗ್ಗೆ ನಮೂದಿಸಲಾಗಿದೆ. ನಿ.ಪಿ. 5 ನ್ನು ಇದೇ ಮೊದಲಬಾರಿಗೆ ನೋಡುತ್ತಿದ್ದೇನೆ. ನಾನು ಮತ್ತು ಚಾ.ಸಾ. 6 ಸ್ನೇಹಿತರು ಎಂದರೆ ಸರಿ. ನಿ.ಪಿ. 5 ಬಸಪ್ಪ ಮತ್ತು ಹುಲಿಗೆಮ್ಮ ಇದ್ದ ಮನೆ ಎಂದು ನಿ.ಪಿ. 4 ರಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಬಸಪ್ಪ ಇವರು ಹುಲಿಗೆಮ್ಮನ ಗಂಡ ಎಂಬ ವಿಚಾರ ನಿ.ಪಿ. 4 ರಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಾನು ಕೂಡ್ಲಗಿ ತಾಲೂಕಿನ ಚಿಕ್ಕಬೋಗೇಹಳ್ಳಿ ಗ್ರಾಮಕ್ಕೆ ಹೋಗಿಯೇ ಇಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ ಮತ್ತು ಫೋಟೋ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾ.ಸಾ. 1 ಮತ್ತು 6 ರವರ ಮಾತು ಕೇಳಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 15-09-2022 ರಂದು ನಮ್ಮ ಸಮಕ್ಷಮ ಮ. 3.00 ರಿಂದ 4.00 ರವರೆಗೆ ಪಂಚನಾಮೆ ಜರುಗಿಸಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

ಓ. ಹೇ. ಕೇ. ಸರಿ ಇದೆ,

1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,

ಸಿಂಧನೂರು.